

ಸಂತೋಷ್ ಸಸಿಹಿತ್ಲು

# ನಾವೂ ಚಂದ್ರಲೋಕಕ್ಕೆ ಹೊರಟೆವು

ಅಂದು ರವಿವಾರ. ಅಮ್ಮ ಕೊಟ್ಟ ಬಿಸಿ ಬಿಸಿ ಉಪ್ಪಿಟ್ಟು ತಿಂದು ಹೋಂ ವರ್ಕ್ ಮಾಡುತ್ತಿದ್ದೆ. ಅಷ್ಟರಲ್ಲಿ ಮಿತ್ರ ಗುಂಡನ ಆಗಮನವಾಯ್ತು. ‘ಈ ಹೋಂ ವರ್ಕ್ ಸಾಕು. ನಾವೆಲ್ಲಾ ಚಂದ್ರಲೋಕಕ್ಕೆ ಹೋಗುತ್ತಿದ್ದೇವೆ ನೀನೂ ಬಾ’ ಎಂದು ನನ್ನ ಪುಸ್ತಕಗಳನ್ನು ಮುಚ್ಚಿದ. ‘ಏನು ತಲೆ ಹರಟೆ ಮಾಡುತ್ತಿರುವಿಯಾ ಗುಂಡ, ಚಂದ್ರಲೋಕಕ್ಕೆ ಹೋಗುವುದೆಂದರೆ ಅಮ್ಮ ಡಬ್ಬಿಯಲ್ಲಿ ಅಡಗಿಸಿಟ್ಟ ಲಾಡು ಕದ್ದಷ್ಟು ಸುಲಭವೆಂದು ತಿಳಿದಿರುವೆಯಾ?’ ಎಂದು ನಾನು ಗುಂಡನ ಮೂಗು ಮುರಿದೆ. ‘ಸುಲಭ ಉಂಟೋ ಇಲ್ಲವೋ. ಈಗ ನೀನು ನಮ್ಮೊಂದಿಗೆ ಬರುವಿಯಾ ಎಂದು ಹೇಳು’ ಎಂದ ಗುಂಡ.

‘ನೋಡು ಗುಂಡಾ, ಚಂದ್ರಲೋಕಕ್ಕೆ ಹೋಗುವುದೆಂದರೆ ಹುಡುಗಾಟವಲ್ಲ. ಅದಕ್ಕೆ ಗಗನನೌಕೆ ಬೇಕು, ಅದನ್ನು ಚಲಾಯಿಸಲು ತಜ್ಞ ಡ್ರೈವರ್ ಬೇಕು. ಮಾರ್ಗ ಮಧ್ಯದಲ್ಲಿ ಅಕಸ್ಮಾತ್ ಕೈಕೊಟ್ಟರೆ ಅದನ್ನು ದುರಸ್ತಿ ಮಾಡಲು ಅನುಭವಿ ಮೆಕ್ಯಾನಿಕ್ ಬೇಕು’ ನಾನಂದೆ.

‘ಸೋಮು, ನಾನೆಲ್ಲ ವ್ಯವಸ್ಥೆ ಮಾಡಿದ್ದೇನೆ. ಗಗನನೌಕೆಯನ್ನು ನಿನ್ನೆನೇ ಖರೀದಿಸಿ ತಂದಿದ್ದೇನೆ. ಚಲಾಯಿಸಲು ಶೀನಿ ಇದ್ದಾನೆ. ಒಂದು ವೇಳೆ ಅದು ಕೆಟ್ಟರೆ ದುರಸ್ತಿ ಮಾಡಲು ಕಲ್ಲೇಶಿ ಇದ್ದಾನೆ. ಇಷ್ಟೆಲ್ಲಾ ಇರುವಾಗ ನಿನಗೇಕೆ ಹೆದರಿಕೆ? ಬೇಗ ಹೊಸ ಅಂಗಿ ಹಾಕಿಕೊಂಡು ರೆಡಿಯಾಗಿರು. ನಾವು ಮಧ್ಯಾಹ್ನ ಇಲ್ಲಿಗೆ ಬರುತ್ತೇವೆ’ ಎನ್ನುತ್ತಾ ಗುಂಡ ಕಾಲ್ಕಿತ್ತ. ಎಂದಾದರೊಮ್ಮೆ ಚಂದ್ರನ ಮೇಲೆ ಕಾಲಿಡಬೇಕೆಂದು ನಾನೂ ಕನಸು ಕಂಡಿದ್ದೆ. ಆ ಅವಕಾಶ ತಾನಾಗಿಯೇ ಬಂದಿರುವಾಗ ಬಿಡಬಾರದು ಎಂದು ಹೋಗಲು ನಿರ್ಧರಿಸಿದ.

ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ಗುಂಡ, ಶೀನಿ ಮತ್ತು ಕಲ್ಲೇಶಿ ಗಗನನೌಕೆಯೊಂದಿಗೆ ನನ್ನ ಮನೆಗೆ ಬಂದರು. ನಾವೆಲ್ಲ ಅಮ್ಮನಿಗೆ ತಿಳಿಯದಂತೆ ಮನೆಯ ಹಿತ್ತಲಿಗೆ ಹೋಗಿ ಒಬ್ಬೊಬ್ಬರಾಗಿ ಗಗನನೌಕೆಯಲ್ಲಿ ಕುಳಿತೆವು. ಶೀನಿ ಡ್ರೈವರ್ ಸೀಟಿನಲ್ಲಿ ಕುಳಿತ. ಅವನಿಗೆ ಮಾರ್ಗದರ್ಶನ ನೀಡಲು ನಮ್ಮ ಟೀಮ್ ಲೀಡರ್ ಗುಂಡ ಅವನ ಪಕ್ಕದ ಸೀಟಿನಲ್ಲಿ ಕುಳಿತ. ನಾನು ಮತ್ತು ಕಲ್ಲೇಶಿ ಹಿಂದಿನ ಸೀಟಿನಲ್ಲಿ ಆಸೀನರಾದೆವು. ಅಷ್ಟರಲ್ಲಿ ಶೀನಿ ‘ರೆಡಿ, ಸ್ಟೆಡೀ, ಗೊ’ ಎಂದು ಒಮ್ಮೆಲೆ ಗಗನನೌಕೆಯನ್ನು ರೊಯ್ಯನೆ ಆಕಾಶದತ್ತ ಉಡಾಯಿಸಿದ. ನಾಲ್ವರಲ್ಲೂ ಉತ್ಸಾಹ ತುಂಬಿ ತುಳುಕುತಿತ್ತು. ಚಂದ್ರಲೋಕವನ್ನು ಕಣ್ತುಂಬಾ ನೋಡಬೇಕು. ಮರುದಿನ ಶಾಲೆಯಲ್ಲಿ ಎಲ್ಲ ಗೆಳೆಯರೊಂದಿಗೆ ನಮ್ಮ ಅನುಭವವನ್ನು ಹಂಚಿಕೊಳ್ಳಬೇಕು ಎಂದು ನಾವು ನಿರ್ಧರಿಸಿದೆವು. ಗಗನನೌಕೆ ಶರವೇಗದಲ್ಲಿ ಸಾಗುತ್ತಿತ್ತು. ಅದಕ್ಕಿಂತಲೂ ವೇಗವಾಗಿ ಒಳಗೆ ಕುಳಿತ ನಮ್ಮ ಚರ್ಚೆ ಸಾಗುತ್ತಿತ್ತು. ಆದರೆ, ನಾವು ಭೂಮಿಯನ್ನು ಬಿಟ್ಟು ಮೂರು ತಾಸು ಕಳೆದರೂ ಚಂದ್ರನನ್ನು ತಲುಪುವ ಯಾವುದೇ ಲಕ್ಷಣ ಕಂಡುಬಾರದಿದ್ದಾಗ ಕಲ್ಲೇಶಿ ಒಮ್ಮೊಂದೊಮ್ಮೆಗೆ ‘ಈ ಚಂದ್ರಲೋಕ ಎಲ್ಲಿಯೂ ಕಾಣಿಸುತ್ತಿಲ್ಲವಲ್ಲ. ನನಗೆ ಭಯವಾಗುತ್ತಿದೆ. ನಾನು ಚಂದ್ರಲೋಕಕ್ಕೆ ಬರೋಲ್ಲ. ನಾವು ಭೂಮಿಗೆ ಹಿಂತಿರುಗೋಣ’ ಎಂದು ಗಲಾಟೆ ಎಬ್ಬಿಸಿದ. ‘ನಾನೂ ಅಮ್ಮನಿಗೆ ಹೇಳಿಲ್ಲ, ನಾನೂ ಚಂದ್ರಲೋಕ್ಕೆ ಬರಲ್ಲ’ ಎಂದು ಕಲ್ಲೇಶಿಯ ಧ್ವನಿಗೆ ನಾನು ಧ್ವನಿಗೂಡಿಸಿದೆ.

‘ಏಕಿಷ್ಟು ಗಲಾಟೆ ಮಾಡುತ್ತೀರಾ. ಇನ್ನು ಅರ್ಧ ಗಂಟೆಯಲ್ಲಿ ನಾವು ಚಂದ್ರನಲ್ಲಿ ಇಳಿಯುತ್ತೇವೆ. ಆ ತನಕ ಬಾಯಿಮುಚ್ಚಿಕೊಂಡಿರಿ’ ಎಂದು